**ಸಾಕ್ಷಿಯನ್ನು ದಿಃ 08–04–2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ– ವಾದಿ ಪರ ಶ್ರೀ ಹೆಚ್ ಪಿ ಎಸ್ ವಕೀಲರಿಂದಃ–**

1. ವಾದಿ ನನಗೆ ಪರಿಚಯವಿದ್ದಾನೆ. ಈ ದಾವೆಯನ್ನು ಯಾವ ಉದ್ದೇಶಕ್ಕೆ ದಾಖಲಿಸಲಾಗಿದೆ ವಾದಿ ಏನೇನು ದಾಖಲೆ ಕೊಟ್ಟಿದ್ದಾರೆಂದು ನನಗೆ ಗೊತ್ತಿದೆ. ನಾನು ಏನೇನು ದಾಖಲೆ ಕೊಟ್ಟಿದ್ದೇನೆಂದು ಮಾಹಿತಿ ಇದೆ ಎಂದರೆ ಸರಿ. ನನ್ನ ಸ್ವಂತ ಊರು ದಾವಣಗೆರೆ ತಾಲ್ಲೂಕು ಗಬ್ಬೂರು. ನನ್ನ ತಂದೆಗೆ ನಾವು ಒಟ್ಟು 5 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು.

2. ವಾದಿ ಅವರ ತಂದೆ ರಾಮಲಿಂಗಪ್ಪರವರ ಹಿರಿಯ ಮಗ ಎಂದರೆ ಸರಿ. ವಾದಿಗೆ ಒಬ್ಬ ತಮ್ಮ ಮತ್ತು ಒಬ್ಬ ತಂಗಿ ಇದ್ದಾರೆ ಎಂದರೆ ಸರಿ. ವಾದಿ ತಂದೆ ರಾಮಲಿಂಗಪ್ಪ ಮೂಲತಃ ಹೊಸದುರ್ಗ ತಾಲ್ಲೂಕಿನವರು ಎಂದರೆ ಸರಿ. ಅವರು ಬೆಂಗಳೂರಿನ ಬಿ ಇ ಎಂ ಎಲ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ರಾಮಲಿಂಗಪ್ಪನ ಹೆಂಡತಿ ಪ್ರೇಮಾಲೀಲಾ ಎಂಬುವವರು ಬೆಂಗಳೂರಿನ ಐ ಟಿ ಐ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಪ್ರೇಮಾಲೀಲಾ ಅನಾರೋಗ್ಯದಿಂದ ದಿನಾಂಕ 10–2–2002 ರಂದು ತೀರಿಕೊಂಡರು ಎಂದರೆ ಸರಿ. ರಾಮಲಿಂಗಪ್ಪ ಸ್ವಯಂ ನಿವೃತ್ತಿ ಪಡೆದು ರಿಯಲ್ ಏಸ್ಟೇಟ್ ಮಾಡುತ್ತಿದ್ದರು ಎಂದರೆ ಸರಿ. ರಾಮಲಿಂಗಪ್ಪ ತನ್ನ ಹೆಂಡತಿ ಮತ್ತು ಮೂರು ಜನ ಮಕ್ಕಳೊಂದಿಗೆ ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸರಿ.

This is a True Copy of the Court Records Online. Authenticated @ districts.ecourtsindia.com/cnr/KASM310031302021/truecopy/order-9.pdf

3. ರಾಮಲಿಂಗಪ್ಪ ನಂತರ ತರಿಕೆರೆಗೆ ಬಂದು ಖಾಸಗಿ ಬಸ್ಸುಗಳನ್ನು ಖರೀದಿ ಮಾಡಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ರಾಮಲಿಂಗಪ್ಪ ಎಂ ಸಿ ಹಳ್ಳಿ ಗ್ರಾಮದಲ್ಲಿ ಕೆಲವು ಆಸ್ತಿ ಖರೀದಿ ಮಾಡಿದ್ದರು ಎಂದರೆ ಸರಿ. ಎಂ ಸಿ ಹಳ್ಳಿಯ ತಮ್ಮ ಜಮೀನಿನಲ್ಲಿ ರಾಮಲಿಂಗಪ್ಪರವರು ಒಂದು ಸಣ್ಣ ಮನೆ ಕಟ್ಟಿದ್ದರು ಎಂದರೆ ಸರಿ. ಸಾಕ್ಷಿ ಪುನಃ ಕಟ್ಟಿದ್ದ ಮನೆಯನ್ನು ಖರೀದಿ ಮಾಡಿದ್ದರು ಎನ್ನುತ್ತಾರೆ.

4. ರಾಮಲಿಂಗಪ್ಪ ಅನಾರೋಗ್ಯದಿಂದ ಭದ್ರಾವತಿಯ ನಿರ್ಮಲ ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಸಾಕ್ಷಿ ನಾನೇ ಆಸ್ಪತ್ರೆಗೆ ದಾಖಲಿಸಿದ್ದೆ ಎನ್ನುತ್ತಾರೆ. ರಾಮಲಿಂಗಪ್ಪ ದಿನಾಂಕ 16-4-2021 ರಂದು ನಿರ್ಮಲ ಆಸ್ಪತ್ರೆಯಲ್ಲಿ ಮೃತ ಪಟ್ಟರು ಎಂದರೆ ಸರಿ. ವಾದಿ ಮತ್ತು ಅವರ ಕುಟುಂಬದವರು ರಾಮಲಿಂಗಪ್ಪನ ಶವ ಸಂಸ್ಕಾರವನ್ನು ಮಾಡಿದರು ಎಂದರೆ ಸಾಕ್ಷಿ ನಾನು ಶವ ಸಂಸ್ಕಾರ ಮಾಡಿದ್ದೆ ಮತ್ತು ಅದರಲ್ಲಿ ವಾದಿ ಮತ್ತು ಅವರ ಕುಟುಂಬದವರು ಭಾಗವಹಿಸಿದ್ದರು ಎನ್ನುತ್ತಾರೆ. ರಾಮಲಿಂಗಪ್ಪ ಎಂ ಸಿ ಹಳ್ಳಿ ಗ್ರಾಮದಲ್ಲಿ ವಾಸವಿದ್ದಾಗ ವಾದಿಯರಿಗೆ ಗೊತ್ತಾಗದಂತೆ ನಾನು ಅವರನ್ನು ನಿರ್ಮಲ ಆಸ್ಪತ್ರೆಗೆ ತಂದು ದಾಖಲಿಸಿದ್ದೆ ಎಂದರೆ ಸಾಕ್ಷಿ ರಾಮಲಿಂಗಪ್ಪ ನನ್ನ ಜೊತೆಯಲ್ಲಿಯೇ ವಾಸವಿದ್ದರು, ಹಾಗಾಗಿ ನಾನೇ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದೆ ಎನ್ನುತ್ತಾರೆ. ರಾಮಲಿಂಗಪ್ಪ ಆಸ್ಪತ್ರೆಗೆ ದಾಖಲಾದ ವಿಚಾರ ವಾದಿ, ಅವರ ತಮ್ಮ ಮತ್ತು ತಂಗಿಗೆ ಮಾಹಿತಿ ಇರಲಿಲ್ಲ ಎಂದರೆ ಸಾಕ್ಷಿ ನನ್ನ ಗಂಡ ರಾಮಲಿಂಗಪ್ಪ ಅವರಿಗೆ ಮಾಹಿತಿ ತಿಳಿಸುವುದು ಬೇಡ ಎಂದು ಹೇಳಿದ್ದರು, ಹಾಗಾಗಿ ಹೇಳಿರಲಿಲ್ಲ ಎನ್ನುತ್ತಾರೆ. ತನ್ನ ಮಕ್ಕಳಿಗೆ ಹೇಳುವುದು ಬೇಡ ಎಂದು ರಾಮಲಿಂಗಪ್ಪ ಬರವಣಿಗೆ ಮಾಡಿದ್ದರೇ ಎಂಬ

This is a True Copy of the Court Records Online. Authenticated @ districts.ecourtsindia.com/cnr/KASM310031302021/truecopy/order-9.pdf

ಪ್ರಶ್ನೆಗೆ ಸಾಕ್ಷಿ ವಾದಿಯರ ಜೊತೆ ನನ್ನ ಗಂಡನಿಗೆ ಯಾವುದೇ ಸಂಪರ್ಕ ಇರಲಿಲ್ಲ ಎನ್ನುತ್ತಾರೆ.

5. ವಾದಿ, ಅವರ ತಂಗಿ ಮತ್ತು ತಮ್ಮನ ಜೊತೆ ರಾಮಲಿಂಗಪ್ಪನನ್ನು ನೋಡಿಕೊಳ್ಳುತ್ತಿದ್ದರು ಎನ್ನುವುದು ಸುಳ್ಳು. ಸಾಕ್ಷಿ ಸ್ವ ಇಚ್ಚೆಯಿಂದ ವಾದಿ ಮತ್ತು ಅವರ ತಮ್ಮ, ತಂಗಿ ಎಂ ಸಿ ಹಳ್ಳಿಯಲ್ಲಿ ಇರಲಿಲ್ಲ ಎನ್ನುತ್ತಾರೆ. ರಾಮಲಿಂಗಪ್ಪ ತೀರಿಕೊಂಡ ವಿಚಾರ ವಾದಿಗೆ ಅವರ ಸಂಬಂಧಿಕರ ಮೂಲಕ ಗೊತ್ತಾಯಿತು ಎಂದರೆ ಸಾಕ್ಷಿ ನಮಗೆ ಅವರ ಸಂಪರ್ಕ ಇರಲಿಲ್ಲ, ಹಾಗಾಗಿ ಸಂಬಂಧಿಕರು ಹೇಳಿರಬಹುದು ಎನ್ನುತ್ತಾರೆ. ವಾದಿ, ಅವರ ತಂಗಿ ಮತ್ತು ತಮ್ಮ ಏಲ್ಲಿ ವಾಸವಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

6. ರಾಮಲಿಂಗಪ್ಪರವರ ಮರಣ ಪ್ರಮಾಣ ಪತ್ರ 1 ನೇ ಪ್ರತಿವಾದಿ ನಗರ ಸಭೆಯಲ್ಲಿ ದಾಖಲಾಗಿದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ನಾನು ರಾಮಲಿಂಗಪ್ಪನ ಹೆಂಡತಿ ಎಂದು ಮೋಸದಿಂದ ನನ್ನ ಹೆಸರು ಬರೆಸಿದ್ದೇನೆ ಎನ್ನುವುದು ಸರಿಯಲ್ಲ. ನಾನು ನನ್ನ ಹೆಸರನ್ನು ಮರಣ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರ ವಾದಿ ಮತ್ತು ಆತನ ಸಹೋದರ–ಸಹೋದರಿಯರಿಗೆ ಗೊತ್ತಿರಲಿಲ್ಲ ಎಂದರೆ ಸಾಕ್ಷಿ ನಾನು ರಾಮಲಿಂಗಪ್ಪರವರನ್ನು ಮದುವೆಯಾಗಿರುವುದು ಮತ್ತು ಇತರೇ ಎಲ್ಲಾ ವಿಚಾರವು ವಾದಿ ಮತ್ತು ಅವರ ಸಂಬಂಧಿಕರಿಗೆ ಗೊತ್ತಿದೆ ಎನ್ನುತ್ತಾರೆ.

7. ನಮ್ಮ ಕುಟುಂಬದಲ್ಲಿ ಯಾರಾದರು ಮೃತ ಪಟ್ಟರೆ 3 ಮತ್ತು 7 ನೇ ದಿನಕ್ಕೆ ಕಾರ್ಯ ಮಾಡುತ್ತಾರೆ ಎಂದರೆ ಸರಿ. ಸದರಿ ಕಾರ್ಯದಲ್ಲಿ ನಿರತರಾದ ಕಾರಣ ವಾದಿ ಮತ್ತು ಅವರ ಕಡೆಯವರು 1 ನೇ ಪ್ರತಿವಾದಿಯನ್ನು ಭೇಟಿಯಾಗಿ ಮರಣ ಪ್ರಮಾಣ

This is a True Copy of the Court Records Online. Authenticated @ districts.ecourtsindia.com/cnr/KASM310031302021/truecopy/order-9.pdf

ಪತ್ರವನ್ನು ಪಡೆಯಲು ಸಾಧ್ಯವಾಗಲಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ, ನಾನು ಕೊಟ್ಟ ದಾಖಲೆಯ ಪ್ರಕಾರ ನಗರ ಸಭೆಯವರು ನನಗೆ ಮರಣ ಪ್ರಮಾಣ ಪತ್ರವನ್ನು ಕೊಟ್ಟಿದ್ದಾರೆ ಎನ್ನುತ್ತಾರೆ. ದಿನಾಂಕ 26–4–2021 ರಂದು ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ನಗರ ಸಭೆಗೆ ಹೋದಾಗ ನನ್ನ ಹೆಸರು ರಾಮಲಿಂಗಪ್ಪನ ಮರಣ ಪ್ರಮಾಣ ಪತ್ರದಲ್ಲಿ ಅವರ ಹೆಂಡತಿ ಎಂದು ನಮೂದಾಗಿರುವ ವಿಚಾರ ಗೊತ್ತಾಯಿತು ಎಂದರೆ ಸಾಕ್ಷಿ ವಾದಿಗೆ ಗೊತ್ತಿರುವಂತೆ 25 ವರ್ಷದ ಹಿಂದೆಯೇ ನಾನು ರಾಮಲಿಂಗಪ್ಪನವರನ್ನು ಮದುವೆಯಾಗಿದ್ದೇನೆ ಎನ್ನುತ್ತಾರೆ. ಮರಣ ಪ್ರಮಾಣ ಪತ್ರದಲ್ಲಿ ನನ್ನ ಹೆಸರು ಇದ್ದ ಬಗ್ಗೆ ನಿಪಿ–2 ರಂತೆ ವಾದಿ ತಕರಾರು ಕೊಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಗರ ಸಭೆಗೆ ವಾದಿ ಅರ್ಜಿ ಕೊಟ್ಟಿದ್ದು ಮತ್ತು ಅದು ತಿರಸ್ಕರಗೊಂಡಿರುವುದು ನನಗೆ ಗೊತ್ತಿದೆ ಎನ್ನುವುದು ಸರಿಯಲ್ಲ.

8. ನಿಪಿ– 7 ರಂತೆ ವಾದಿ ಹಾಜರುಪಡಿಸಿರುವ ದಾಖಲೆಯಲ್ಲಿ ರಾಮಲಿಂಗಪ್ಪ ಮತ್ತು ಅವರ ವಾರಸುದಾರರ ವಿವರ ಇದೆ ಎಂದರೆ ಸಾಕ್ಷಿ ವಾದಿ ಅದನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ನಿಪಿ–7 ರ ದಾಖಲೆಯಲ್ಲಿ ನನ್ನ ಅಥವಾ ನನ್ನ ಮಗನ ವಿವರ ಇಲ್ಲ ಎಂದರೆ ಸಾಕ್ಷಿ ಸೃಷ್ಟಿ ಮಾಡಿದ ದಾಖಲೆಯಲ್ಲಿ ನಮ್ಮ ಹೆಸರು ಹೇಗೆ ಬರುತ್ತದೆ ಎನ್ನುತ್ತಾರೆ. ಸದರಿ ದಾಖಲೆ ರದ್ದುಪಡಿಸಲು ನಾನು ಯಾವುದೇ ಅರ್ಜಿ ಕೊಟ್ಟಿಲ್ಲ ಎಂದರೆ ಸರಿ.

9. ರಾಮಲಿಂಗಪ್ಪರವರ ಮರಣ ಪ್ರಮಾಣ ಪತ್ರ ಪಡೆದುಕೊಂಡು ಅವರಿಗೆ ಸೇರಿದ ಕೆಎ –66 0801 ಬಸ್ಸಿನ ಮಾಲೀಕತ್ವವನ್ನು ನನ್ನ ಹೆಸರಿಗೆ ಬದಲಾಯಿಸಿಕೊಂಡಿದ್ದೇನೆ

This is a True Copy of the Court Records Online. Authenticated @ districts.ecourtsindia.com/cnr/KASM310031302021/truecopy/order-9.pdf

ಎಂದರೆ ಸಾಕ್ಷಿ ಅವರ ಹೆಂಡತಿಯಾಗಿ ಕಾನೂನು ಪ್ರಕಾರ ನನ್ನ ಹೆಸರಿಗೆ ಆಗಿದೆ ಎನ್ನುತ್ತಾರೆ. ಈಗ ನನಗೆ ತೋರಿಸಿದ ದಾಖಲೆ ಸದರಿ ನನ್ನ ಹೆಸರಿಗೆ ಇರುವ ಬಸ್ಸಿನ ಬಿ ಎಕ್ಸ್ ಸ್ಟ್ಯಾಕ್ಟ್ ಎಂದರೆ ಸರಿ. ಸಾಕ್ಷಿ ಗುರುತಿಸಿದ ದಾಖಲೆಯನ್ನು ನಿಪಿ–10 ಎಂದು ಗುರುತಿಸಲಾಯಿತು. ನಿಪಿ–1 ರ ದಾಖಲೆಯನ್ನು ಮೋಸದಿಂದ ಸೃಷ್ಟಿ ಮಾಡಿಕೊಂಡು ಬಸ್ಸಿನ ದಾಖಲೆಯನ್ನು ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆ ಎನ್ನುವುದು ಸುಳ್ಳು. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ–1 ರ ದಾಖಲೆಯನ್ನು 1 ನೇ ಪ್ರತಿವಾದಿಯೊಂದಿಗೆ ಷರೀಕಾಗಿ ಸೃಷ್ಟಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

10. ನನ್ನ ಮದುವೆ ರಾಮಲಿಂಗಪ್ಪರವರ ಜೊತೆ ದಿನಾಂಕ 16–4–1995 ರಲ್ಲಿ ಚನ್ನಗಿರಿ ತಾಲ್ಲೂಕು, ಹೂವಿನಹಳ್ಳಿಯ ವೀರಭದ್ರೇಶ್ವರ ದೇವಸ್ಥಾನದಲ್ಲಿ ಆಗಿತ್ತು. ಆ ಸಂಬಂಧ ದಾಖಲೆ ಕೊಟ್ಟಿಲ್ಲ. 1995 ರಲ್ಲಿ ರಾಮಲಿಂಗಪ್ಪನ ಹೆಂಡತಿ ಪ್ರೇಮಾಲೀಲಾ ಬದುಕಿದ್ದರು ಎಂದರೆ ಸರಿ. ಸಾಕ್ಷಿ ಸ್ವ ಇಚ್ಛೆಯಿಂದ ಅವರಿಗೆ ಆರೋಗ್ಯ ಸರಿ ಇರಲಿಲ್ಲ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಆಗುತ್ತಿರಲಿಲ್ಲ ಎನ್ನುತ್ತಾರೆ. ನಾನು ರಾಮಲಿಂಗಪ್ಪರವರನ್ನು ಮದುವೆಯಾದ ವಿಚಾರ ವಾದಿ ಮತ್ತು ಆತನ ಸಹೋದರ – ಸಹೋದರಿಗೆ ಗೊತ್ತಿರಲಿಲ್ಲ ಎನ್ನುವುದು ಸುಳ್ಳು. ನನ್ನ ಮಗ ದಿನಾಂಕ 09–01–1999 ರಂದು ಜನಿಸಿರುತ್ತಾನೆ. ಆಗ ಪ್ರೇಮಾಲೀಲಾ ಬದುಕಿದ್ದರು ಎಂದರೆ ಸರಿ. ಮೊದಲನೆಯ ಹೆಂಡತಿ ಪ್ರೇಮಾಲೀಲಾ ಬದುಕಿದ್ದಾಗಲೇ ನಾನು ರಾಮಲಿಂಗಪ್ಪರವರನ್ನು ಮದುವೆಯಾಗಿದ್ದೆ ಎಂದರೆ ಸರಿ. ನಾನು ರಾಮಲಿಂಗಪ್ಪರವರ ಕಾನೂನು ಬದ್ಧ ಹೆಂಡತಿಯಲ್ಲದ ಕಾರಣ ನಿಪಿ–1 ರ ಮರಣ ಪ್ರಮಾಣ ಪತ್ರದಲ್ಲಿ

This is a True Copy of the Court Records Online. Authenticated @ districts.ecourtsindia.com/cnr/KASM310031302021/truecopy/order-9.pdf

ನಾನು ಅವರ ಹೆಂಡತಿ ಎಂದು ಬರೆಸುವ ಅಧಿಕಾರ ನನಗೆ ಇರಲಿಲ್ಲ ಎಂದರೆ ಸಾಕ್ಷಿ ನಾನು ರಾಮಲಿಂಗಪ್ಪರವರ ಜೊತೆ 25 ವರ್ಷ ಕಾನೂನು ಬದ್ಧವಾಗಿ ಸಂಸಾರ ಮಾಡಿದ್ದೇನೆ ಎನ್ನುತ್ತಾರೆ.

11. ನನಗೆ ಅಥವಾ ನನ್ನ ಮಗನಿಗೆ ರಾಮಲಿಂಗಪ್ಪರವರಿಗೆ ಸಂಬಂಧಪಟ್ಟ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎನ್ನುವುದು ಸರಿಯಲ್ಲ. ನಿಡಿ–6 ರ ದಾಖಲೆಯನ್ನು ಕಂದಾಯ ಅಧಿಕಾರಿಗಳೊಂದಿಗೆ ಷರೀಕಾಗಿ ಸೃಷ್ಟಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ನಿಡಿ–6 ರ ದಾಖಲೆಯ ಬಗ್ಗೆ ವಾದಿ ಅಥವಾ ಸಹೋದರ –ಸಹೋದರಿಯರಿಗೆ ಮಾಹಿತಿ ಇಲ್ಲ ಎನ್ನುವುದು ಸರಿಯಲ್ಲ. ನನಗೆ ರಾಮಲಿಂಗಪ್ಪರವರ ಜೊತೆ ಯಾವತ್ತು ಮದುವೆಯಾಗಿಲ್ಲ, ಹಾಗಾಗಿ ನಾನು ಯಾವುದೇ ದಾಖಲೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಕಾನೂನು ಬಾಹಿರವಾಗಿ ನನ್ನ ಹೆಸರನ್ನು ಸೇರಿಸಿದ್ದೇನೆ ಎನ್ನುವುದು ಸರಿಯಲ್ಲ.

12. ಸುಳ್ಳು ಪ್ರತಿವಾದ ಪತ್ರ ಮತ್ತು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ ಕೇ ಸರಿ ಇ ಎ ಒಪ್ಪಿಕೊಳ್ಳಲಾಯಿತು.

ಪ್ರ.ದ.ನ್ಯಾದಂ. ಭದ್ರಾವತಿ

This is a True Copy of the Court Records Online. Authenticated @ districts.ecourtsindia.com/cnr/KASM310031302021/truecopy/order-9.pdf

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KASM310031302021/truecopy/order-9.pdf

www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KASM310031302021/truecopy/order-9.pdf